ಭಂಡ ನಗೆ ತಂದುಕೊಂಡ. ಇಷ್ಟರ ಮೇಲೆ ಆಂಗಿಕ ಅಭಿನಯದ ಮೂಲಕವೋ, ಇಲ್ಲ ಬರೆದೋ ತಿಳಿಸಿದರೂ ಕೂಡ, ನಾನು ಊರನ್ನೇ ಬಿಟ್ಟು ಹೋಗುತ್ತಿರುವವನಲ್ಲವೇ, ಎಂದು ತನ್ನ ಕಳ್ಳ ವ್ಯವಹಾರಕ್ಕೆ ಸಮಜಾಯಿಷಿ ಕೊಟ್ಟುಕೊಂಡ.

ಶೀನಿ ಹುಂಡಿ ಎಗುರಿಸಿದ್ದು, ಊರು ಬಿಡುತ್ತಿರುವುದು ಯಾವುದೂ ಸ್ಪಷ್ಟವಾಗದೆ, ಇಷ್ಟು ಹೊತ್ತಲ್ಲಿ ಇವನು ನಡೆಸುತ್ತಿರುವ ಕಾರುಬಾರು ಏನೆಂದು ಅರಿಯದವಳಾಗಿ, ಅವನು ಕತ್ತಲನ್ನು ಸೀಳುತ್ತಾ ದೂರ ನಕ್ಷತ್ರದ ಬೆಳಕನ್ನು ಹುಡುಕುವವನಂತೆ ಕರಗಿ ಹೋಗುವುದನ್ನೇ ನೋಡುತ್ತಿದ್ದಳು. ಹಾಗೆ ನೋಡುತ್ತಾ, 'ಶೀನಿ ಮಧ್ಯಾಹ್ನದ ಅನ್ನ ಹುಳಿ ಇದೆ ಉಂಡು ಹೋಗು ಬಾ' ಎಂದು ಕರೆಯಬೇಕೆನಿಸಿತು. ಉಡುಗಿದ ದನಿಯಿಂದ ಅದಾಗದೆ ಅಸಹಾಯಕಳಾದಳು.

★★★

ಶ್ರೀನಿವಾಸನ ಮನೆಯ ಅದ್ದೂರಿಯನ್ನು ಕಣ್ಣು ತುಂಬಿಕೊಳ್ಳುತ್ತಾ ಇದ್ದ ಗೋವಿಂದನಿಗೆ ತಾನು ಪ್ರತಿಸಲ ಬಂದಾಗಲೂ ಮನೆ ಹೊಸದರಂತೆ ಕಾಣುವುದಲ್ಲ ಎಂದು ಅಚ್ಚರಿಯಾಯಿತು. ಇತ್ತ ಮನೆಯ ಗೋಡೆಗಳಿಗೆ ಅಂಟಿಸಿದ್ದ ತರಹೇವಾರಿ ಚಿತ್ರಪಟಗಳು, ಹಜಾರದ ಮೂಲೆಗಳಲ್ಲಿ ಇರಿಸಿದ್ದ ಚಿತ್ರವಿಚಿತ್ರ ಮಾದರಿಯ ಕಪಾಟುಗಳು. ಅತ್ತ ಶೀನಿ ಧರಿಸಿದ್ದ ಬಣ್ಣ ಬಣ್ಣದ ವಸ್ತ್ರ, ಕುತ್ತಿಗೆಯ ಚಿನ್ನದ ಸರ, ಕೈ ಬೆರಳುಗಳ ಉಂಗುರ ಗೋವಿಂದಾಚಾರ್ಯನನ್ನು ಅಣಕಿಸುತ್ತಿದ್ದವು. ಅವನ ದೃಷ್ಟಿಯನ್ನು ಬೇರೆಡೆಗೆ ತಿರುಗಿಸುವ ಸಲುವಾಗಿ ತನ್ನನ್ನು ಊರಿಗೆ ಕರೆದಿದ್ದನ್ನು ನೆನಪಿಸುತ್ತ, ಶ್ರೀನಿವಾಸನು 'ನನಗೆ ಊರತ್ತ ಬರುವುದೆಂದರೆ ಕಷ್ಟ ಮತ್ತು ಸಂತೋಷ. ಅಮ್ಮ ಹೋಗಿದ್ದು ಯಾವಾಗಲೂ ಕಾಡುತ್ತದೆ. ನನಗೆ ನೆನಪಿರುವ ಹಾಗೆ ಅಪ್ಪ ಅಮ್ಮನನ್ನು ಒಂದು ದಿನವಾದರೂ ನೆಟ್ಟಗೆ ಮಾತನಾಡಿಸಿದ್ದುಂಟೆ? ನಾವೆಲ್ಲ ಇದ್ದೂ ಕೂಡ ಅಮ್ಮ ನೀರು ಪಾಲಾದರಲ್ಲಾ?' ಎಂದ.

ಗೋವಿಂದ, ಶೀನಿ ಆಡಿದ ಮಾತಿನ ಚುಂಗು ಹಿಡಿದು, 'ಅಪ್ಪನಿಗೆ, ಅಮ್ಮ ಕೂತರೂ ತಪ್ಪು, ನಿಂತರೂ ತಪ್ಪು. ಗತಿಗೆಟ್ಟ ಯಜಮಾನಿಕೆಯ ಹುಚ್ಚು ಕಂಡು ಅಪ್ಪನ ಬಗ್ಗೆ ನನ್ನಲ್ಲಿ ಸಿಟ್ಟು ಉಕ್ಕುತ್ತಿತ್ತು. ಆದರೆ, ಎಲ್ಲ ಸರಿಹೋಗುವ ಮೊದಲೇ ಅಮ್ಮ ಲೋಕ ಬಿಟ್ಟಳು. ಅವಳು ತೀರಿಕೊಂಡದ್ದು ನಿನಗೂ ಗೊತ್ತು. ನೀನು ಮನೆ ಬಿಟ್ಟರೂ, ಅವಳ ಸಾವನ್ನು ಮರೆಯಲು ಸಾಧ್ಯವೇ? ಅವತ್ತು ಮಂಗಳವಾರ. ಅಪ್ಪ ನರಸೀಪುರದ ಸಂಗಮದಲ್ಲಿ ಇದೇ ಬೆಂಗಳೂರಿನ ಸಿರಿವಂತ ಕುಟುಂಬಕ್ಕೆ ಕುಜದೋಷ ಪರಿಹಾರ ನೆರವೇರಿಸುತ್ತಿದ್ದರು. ಹೋಮದ ಕಡ್ಡಿ ಭಗ ಭಗ ಉರಿಯುತ್ತಿತ್ತು. ಕಾವೇರಿ ಸಂಗಮದಿಂದ ಅಮ್ಮ ಸತ್ತ ಸುದ್ದಿ ಬಂದದ್ದು ಆಗಲೇ. ನದಿ ತೀರದಲ್ಲಿ ನಿಂತು ಮಾತಾಡುತ್ತಿದ್ದವರಿಗೆಲ್ಲ ಅಪ್ಪ ಕೊಟ್ಟ ಉತ್ತರವು ಅಲ್ಲಿದ್ದವರಿಗೆಲ್ಲಾ ಆಗಿಂದಾಗಲೇ ಒಪ್ಪಿಕೊಂಡುಬಿಡುವಂತಿತ್ತು. "ಎಲ್ಲಾ ದೈವ ಚಿತ್ತ, ನಮ್ಮದೇನಿದೆ" ಅಂದ.

ಗೋವಿಂದನು ಮುಂದಿನ ಮಾತಾಗಿ, 'ಅಪ್ಪ ಮಡಿ ನೀರು ಎಲ್ಲಿ' ಅಂತ ಅಮ್ಮನ ಕಡೆ ಉರಿಗಣ್ಣು ಬಿಡುವಾಗ್ಗೆ ಅಮ್ಮ ಬಾವಿ ನೀರು ತರಲೇ ಅಂದಳು. ಕೂತ ಭಕ್ತರ ಎದುರೇ, "ಬಾವಿ ನೀರು ಅಂದರೆ, ಅದು ಮಡಿ ನೀರೆ? ಈ ಕಾವೇರಿ ಕಪಿಲೆಯ ಸಂಗಮದಲ್ಲಿ ಕುಜದೋಷ ಪರಿಹಾರ ಅಂತ ಯಾಕಾಯಿತು ಹೇಳು. ಒಂದು ಚರಿಗೆ ಪವಿತ್ರ ಸಂಗಮ ಜಲ ತರಲು ನಿನ್ನ ಕಾಲು ಸೇದಿ ಹೋಗಿದೆಯೆ, ಅಷ್ಟೂ ಆಗದೆ? ಬಾವಿಯ ಪಾಚಿಗಟ್ಟಿದ ನೀರು ತರುತ್ತೀನಿ ಅನ್ನುತ್ತೀಯಲ್ಲಾ, ಮಡಿಮೈಲಿಗೆ ಜ್ಞಾನವೆಂಬುದು ಇಲ್ಲದಿದ್ದರೆ ಕೇಡುಗಾಲ ಕಾಲಬುಡದಲ್ಲಿ ಕಾಯುತ್ತಿರುತ್ತದೆ ತಿಳಿ. ಪೂಜೆ ಸಾಂಗವಾಗಿ ಜರುಗಿ ಭಕ್ತರ ಅಭೀಷ್ಟ ನೆರವೇರಬೇಕೋ ಬೇಡವೂ" ಅನ್ನುತ್ತ ಹೋಮಕುಂಡದ ಹೊಗೆಯ ನಡುವೆ ಕೆಂಪು ಕಣ್ಣು ಬಿಟ್ಟ.